ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

26

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ   ದಿನಾಂಕ : DATE : 22/9/2020

ಸೆಂಟ್ರಲ್ ಹಾಲ್‌ನಲ್ಲಿ ಪ್ರಮುಖ ನಾಯಕರ ಎದುರೇ ಘಟನೆ ■ ವರ್ಗಾವಣೆ ವಿಚಾರ ಕಾರಣ

# ಶಾಸಕ-ಸಚಿವ ನಡುವೆ ಜಟಾಪಟಿ

ಉವಾ 22/9/20

ಬೆಂಗಳೂರು: ಸದನದೊಳಗೆ ಆಡಳಿತ ಪಕ್ಷ ಹಾಗೂ ಪ್ರತಿ ಪಕ್ಷಗಳ ಸದಸ್ಯರು ಜಟಾಪಟಿ ನಡೆಸುವುದು ಸಾಮಾನ್ಯ. ಆದರೆ, ಸೋಮವಾರ ವಿಧಾನಸಭೆಯ ಸೆಂಟ್ರಲ್ ಹಾಲ್ ನಲ್ಲಿ ನಡೆದಿದ್ದು ಆಡಳಿತ ಪಕ್ಷದ ಶಾಸಕ ಹಾಗೂ ಸಚಿವ ರೊಬ್ಬರ ನಡುವೆ ಮಾತಿನ ಚಕಮಕಿ ಹಾಗೂ ಏಕವಚನದ ಪ್ರಯೋಗ.

ವರ್ಗಾವಣೆ ವಿಚಾರದಲ್ಲಿ ಸಚಿವ ನಾರಾಯಣಗೌಡ ಹಾಗೂ ಕಡೂರು ಬಿಜೆಪಿ ಶಾಸಕ ಬೆಳ್ಳಿ ಪ್ರಕಾಶ್ ನಡುವೆ ಗಲಾಟೆ ನಡೆದಿದ್ದು ಒಂದು ಹಂತದಲ್ಲಿ ಶಾಸಕರು ಸಚಿವರ ಮೇಲೆ ಹಲ್ಲೆಗೆ ಮುಂದಾಗಿದ್ದರು ಎಂದೂ ಹೇಳಲಾಗಿದೆ. ಇದಕ್ಕೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಸಚಿವ ಕೆ.ಎಸ್. ಈಶ್ವರಪ್ಪ, ವಿ. ಸೋಮಣ್ಣ ಸೇರಿದಂತೆ ಹಲವು ಸಚಿವರು ಸಾಕ್ಷಿಯಾಗಬೇಕಾಯಿತು.

ಸೋಮವಾರ ವಿಧಾನಸಭೆಯ ಪ್ರಶ್ನೋತ್ತರ ಕಲಾಪ ಮುಗಿದ ನಂತರ ವಿಧಾನಸಭೆಯ ಸೆಂಟ್ರಲ್ ಹಾಲ್‌ನ ಲಾಂಜ್‌ನಲ್ಲಿ ಶಾಸಕ ಬೆಳ್ಳಿ ಪ್ರಕಾಶ್ ಅವರು ಎದುರಿಗೆ ಸಿಕ್ಕ ಸಚಿವ ನಾರಾಯಣಗೌಡ ಅವರಿಗೆ 'ತಮ್ಮ ಕೆಲಸ ಏನಾಯಿತು' ಎಂದು ಬಹಿರಂಗವಾಗಿ ಪ್ರಶ್ನಿಸಿದ್ದು ಅದಕ್ಕೆ ನಾರಾಯಣಗೌಡರು 'ಮಾಡುತ್ತೇನೆ' ಎಂದು ಹಾರಿಕೆ ಉತ್ತರ ನೀಡಿದ್ದಾರೆ ಎನ್ನಲಾಗಿದೆ. ▶ 7ನೇ ಪುಟಕ್ಕೆ

## ಮೂಲ-ವಲಸಿಗ ಗೊಂದಲವಿಲ್ಲ



ಘಟನೆ ಬಗ್ಗೆ ಪ್ರತಿಕ್ರಿಯೆ ನೀಡಿದ ತೋಟಗಾರಿಕೆ ಸಚಿವ ನಾರಾಯಣಗೌಡ, ಗಲಾಟೆ ಏನಿಲ್ಲ, ಸಿಂಪಲ್ ವರ್ಗಾವಣೆ ಇತ್ತು. ಆದರ ಬಗ್ಗೆ ಬನ್ನಿ ಮಾತಾಡೋಣ ಎಂದಿದ್ದೆ, ಅವರು ಸ್ವಲ್ಪ ಏಕವಚನದಲ್ಲಿ ಮಾತಾಡಿದರು. ಆದಕ್ಕೆ ನನಗೆ ಸ್ವಲ್ಪ ಬೇಜಾರು ಆಯಿತು. ವರ್ಗಾವಣೆಗೆ ಅನುಮತಿ ನೀಡಲಾಗಿದೆ. ತಾಂತ್ರಿಕ ಕಾರಣದಿಂದ ಉಳಿದುಕೊಂಡಿದೆ. ಆದರೆ, ಅವರು ಆಡಿರುವ ಮಾತಿನಿಂದ ನನಗೆ ಬೇಸರವಾಯಿತು. ಇನ್ನು ಮುಂದೆ ಅವರು ಆ ರೀತಿ ಮಾತನಾಡಬಾರದು. ನನ್ನ ಮೇಲೆ ಅವರು ಹಲ್ಲೆ ನಡೆಸಿಲ್ಲ, ಮುಖ್ಯಮಂತ್ರಿ ನನ್ನನ್ನು ಕರೆದು ಮಾಹಿತಿ ಕೇಳಿದರೆ, ಮಾತನಾಡುತ್ತೇನೆ. ನಮ್ಮಲ್ಲಿ ವಲಸಿಗರು ಮೂಲ ನಿವಾಸಿಗಳು ಎಂದು ಗೊಂದಲವಿಲ್ಲ, ನಾವೆಲ್ಲರೂ ಬಿಜೆಪಿಯವರೇ ಎಂದು ಸಚಿವ ನಾರಾಯಣಗೌಡ ಹೇಳಿದರು.

## ನಾನೂ ಉಪ್ಪು, ಹುಳಿ, ಖಾರ ತಿಂದವನೇ



ಸಚಿವ ನಾರಾಯಣಗೌಡರು ನನಗೆ ಹೋಗಯ್ಯ ಹೋಗು ಅಂದರು. ನಾನೂ ಉಪ್ಪು ಹುಳಿ ಖಾರ ತಿಂದವನೇ ನಾನೂ ಏಕವಚನ ಬಳಸಿದೆ. ಇನ್ನು ಮುಂದೆ ಅವರ ಬಳಿ ಯಾವುದೇ ಕೆಲಸ ತೆಗೆದುಕೊಂಡು ಹೋಗುವುದಿಲ್ಲ, ಬೇರೆ ಯಾವುದೇ ಇಲಾಖೆಯಲ್ಲಿ ಈ ರೀತಿ ಇಲ್ಲ, ಇವರ ಇಲಾಖೆಯಲ್ಲಿ ಮಾತ್ರ ಹೀಗೆ ಆಗಿರುವುದು. ಶಾಸಕರ ಕೆಲಸ ಆಗುವುದಿಲ್ಲ ಎಂದರೆ ಹೇಗೆ ? ಶಿಸ್ತಿನ ಪಕ್ಷ ಆದರೆ, ಕೆಲಸಗಳು ಆಗದಿದ್ದರೆ ಪ್ರಶ್ನೆ ಮಾಡಬಾರದೇ ? ಇದರಲ್ಲಿ ವಲಸಿಗ ಅಥವಾ ಮೂಲ ಅನ್ನುವ ಪ್ರಶ್ನೆ ಇಲ್ಲ, ಎರಡು ತಿಂಗಳಿಂದ ಕೆಲಸ ಆಗದಿದ್ದರೆ ಏನು ಮಾಡುವುದು ಎಂದು ಶಾಸಕ ಬೆಳ್ಳಿ ಪ್ರಕಾಶ್ ಪ್ರಶ್ನಿಸಿದ್ದಾರೆ.